# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಮುನಿರಾಜುಗೌಡ ಪಿ.ಎಂ (ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1881 |
| ಉತ್ತರಿಸುವ ಸಚಿವರು | : | ಮಾನ್ಯ ಕೈಮಗ್ಗ ಮತ್ತು ಜವಳಿ, ಸಕ್ಕರೆ ಹಾಗೂ ಕಬ್ಬು ಅಭಿವೃದ್ಧಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 15-03-2022 |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಆನೇಕಲ್ ಪಟ್ಟಣದಲ್ಲಿ ಕೈಮಗ್ಗ ಅಭಿವೃದ್ಧಿ ನಿಗಮದ ವತಿಯಿಂದ ಕೈಮಗ್ಗ ನೇಕಾರರಿಗೆ ಮನೆಗಳನ್ನು ನಿರ್ಮಿಸಿ ಕೊಡಲಾಗಿದೆಯೇ; | ಆನೇಕಲ್ ಪಟ್ಟಣದಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವತಿಯಿಂದ ಕೈಮಗ್ಗ ನೇಕಾರರಿಗೆ ನಿಗಮದ ಜಮೀನಿನಲ್ಲಿ ಡಚ್ ಯೋಜನೆಯಡಿ ನೇಕಾರರಿಗೆ ಮನೆಗಳನ್ನು ನಿರ್ಮಿಸಿಕೊಡಲಾಗಿದೆ. |
| ಆ) | ಹಾಗಿದ್ದಲ್ಲಿ ಒಟ್ಟು ಎಷ್ಟು ಮನೆಗಳನ್ನು ನಿರ್ಮಿಸಲಾಗಿದೆ ಮತ್ತು ಯಾವಾಗ ಫಲಾನುಭವಿಗಳ ಸ್ವಾಧೀನಕ್ಕೆ ನೀಡಲಾಗಿದೆ; | ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವತಿಯಿಂದ ಡಚ್ ಯೋಜನೆಯಡಿ ಆನೇಕಲ್ ನ ನಿಗಮದ ಜಮೀನಿನಲ್ಲಿ ಒಟ್ಟು 100 ಮನೆಗಳನ್ನು ನಿರ್ಮಿಸಿ ಅರ್ಹ ವಸತಿ ಹಾಗೂ ನಿವೇಶನ ರಹಿತ ನೇಕಾರರಿಗೆ ಹಂಚಿಕೆ ಮಾಡಲಾಗಿದ್ದು, ಸದರಿ ಮನೆಗಳನ್ನು 1984-85ನೇ ಸಾಲಿನಲ್ಲಿ ಫಲಾನುಭವಿಗಳ ಸ್ವಾಧೀನಕ್ಕೆ ನೀಡಲಾಗಿದೆ. |
| ಇ) | ಮನೆಗಳನ್ನು ಸ್ವಾಧೀನ ಪಡೆದುಕೊಂಡ ಫಲಾನುಭವಿಗಳು ಮನೆಗಳಿಗಾಗಿ ನಿಗದಿ ಯಾದ ಹಣವನ್ನು ಪೂರ್ಣ ಪ್ರಮಾಣ ದಲ್ಲಿ ಪಾವತಿಸಿ ಹಲವಾರು ವರ್ಷಗಳೇ ಕಳೆದಿದ್ದರೂ ಮಾಲೀಕರುಗಳಿಗೆ ನೋಂದಣಿ ಮಾಡಿಕೊಡದ ಕಾರಣ ಫಲಾನುಭವಿಗಳು ಸೂಕ್ತ ದಾಖಲೆಗಳಿಲ್ಲದೆ ಅತಂತ್ರ ಪರಿಸ್ಥಿತಿ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br><br>ಸರ್ಕಾರದ ಆದೇಶ ಸಂಖ್ಯೆ: ವಾಕೈ 24 ಜಕೈಯೋ 2016 ದಿನಾಂಕ: 20.03.2017 ರನ್ವಯ ಸರ್ಕಾರದ ವಿವಿಧ ಯೋಜನೆಗಳಡಿ ನೇಕಾರರು ವಸತಿ ಹಾಗೂ ಕಾರ್ಯಾಗಾರ ನಿರ್ಮಾಣಕ್ಕಾಗಿ ಪಡೆದ ಸಾಲ ಮತ್ತು ಬಡ್ಡಿಯನ್ನು ಮನ್ನಾ ಮಾಡಿ ಆದೇಶಿಸಿದ್ದರ ಹಿನ್ನೆಲೆಯಲ್ಲಿ, ಸದರಿ ನೇಕಾರರ ಮನೆಗಳನ್ನು ಅವರ ಹೆಸರಿಗೆ ನೋಂದಣಿ ಮಾಡಿಕೊಡಬೇಕಿರುತ್ತದೆ. ಆದರೆ ಆನೇಕಲ್‌ನಲ್ಲಿರುವ ನಿಗಮದ ಜಮೀನು ಇನ್ನೂ ಕೆ.ಐ.ಎ.ಡಿ.ಬಿ ರವರ ಹೆಸರಿನಲ್ಲಿರುವುದರಿಂದ, ನಿಗಮದ ಹೆಸರಿಗೆ ನೋಂದಣಿ ಯಾಗಿರುವುದಿಲ್ಲ, ಇದರಿಂದಾಗಿ ನೇಕಾರರಿಗೆ ಮನೆಗಳನ್ನು ಅವರ ಹೆಸರಿಗೆ ನೋಂದಣಿ ಮಾಡಲು ವಿಳಂಬವಾಗುತ್ತಿದೆ ಹಾಗೂ ಈಗಾಗಲೇ ಕೆ.ಐ.ಎ.ಡಿ.ಬಿ ರವರಿಗೆ ಪಾವತಿಸಬೇಕಾದ ಸಂಪೂರ್ಣ ಹಣವನ್ನು ಸಂದಾಯ ಮಾಡಿರುವುದರಿಂದ ಈ ಜಮೀನನ್ನು ನಿಗಮದ ಹೆಸರಿಗೆ ನೋಂದಣಿ ಮಾಡುವ ಕುರಿತಂತೆ ಕೆ.ಐ.ಎ.ಡಿ.ಬಿ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ನೋಂದಣಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ. ಜಮೀನು ನಿಗಮದ ಹೆಸರಿಗೆ ನೋಂದಣಿಯಾದ ಕೂಡಲೇ ಎಲ್ಲಾ ಮನೆಗಳನ್ನು ನೇಕಾರರ ಹೆಸರಿಗೆ ನೊಂದಣಿ ಮಾಡಲು ಕ್ರಮ ಕೈಗೊಳ್ಳಲಾಗುವುದು. |
| ಈ) | ಬಂದಿದ್ದಲ್ಲಿ, ಪೂರ್ತಿ ಹಣ ಪಾವತಿಸಿರುವ ಫಲಾನುಭವಿಗಳಿಗೆ ಮನೆಗಳನ್ನು ಕೂಡಲೇ ನೋಂದಣಿ ಮಾಡಿಕೊಡುವ ಬಗ್ಗೆ ಸರ್ಕಾರ ಕೈಗೊಳ್ಳುತ್ತಿರುವ ಕ್ರಮಗಳೇನು? | |

ಸಂ: CI 102 JAKE 2022

(ಶಂಕರ ಬ ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಸಕ್ಕರೆ ಹಾಗೂ ಕಬ್ಬು ಅಭಿವೃದ್ಧಿ ಸಚಿವರು